ದಕ್ಷಿಣ ಭಾರತದಲ್ಲಿ ರಾಮಕೃಷ್ಣ ಮಹಾಸಂಘದ ಮಾತೃಸಂಸ್ಥೆ

ಚೆನ್ನೈ ಶ್ರೀರಾಮಕೃಷ್ಣ ಮಠ

(ಬೆಳೆದುಬಂದ ಪುಣ್ಯಕತೆ)

ಮಂಗಳಮ್ಮ

ದಕ್ಷಿಣೇಶ್ವರದಲ್ಲಿನ ಶ್ರೀರಾಮಕೃಷ್ಣರ ಕೊಠಡಿ. ಶ್ರೀರಾಮಕೃಷ್ಣರ ಸುತ್ತ-ಮುತ್ತ ಭಕ್ತರು ನೆರೆದಿದ್ದಾರೆ. ಯುವಕ ನರೇಂದ್ರನೂ ತನ್ನ ಜೊತೆಯವರೊಂದಿಗೆ ಕುಳಿತಿದ್ದಾನೆ. ಒಬ್ಬ ಭಕ್ತ, "ಮಹಾಶಯರೇ, ಜನಗಳ ಉಪಕಾರಕ್ಕಾಗಿ ಆಸ್ಪತ್ರೆ, ಬಾವಿ, ಛತ್ರ ಇತ್ಯಾದಿಗಳನ್ನು ಕಟ್ಟಿಸುವ ಉದ್ದೇಶವಿದೆ ನನಗೆ" ಎಂದನು. ಶ್ರೀರಾಮಕೃಷ್ಣರು, "ಏನಂದೆ? ಜನಗಳ ಉಪಕಾರಕ್ಕಾಗಿ ಎಂದು ಹೇಳಲು ನೀನೆಷ್ಟರವನು? ಜಗತ್ತೇನು ಅಂಗೈ ಅಗಲವೇ? ಭಗವಂತನಲ್ಲದೆ ಬೇರೆ ಯಾರು ಉಪಕಾರ ಮಾಡಬಲ್ಲರು? ಸೇವೆ ಎನ್ನು, ಭಗವಂತನ ಸೇವೆಗೆ ಒದಗಿರುವ ಸದವಕಾಶವೆನ್ನು" ಎಂದು ಏರು ಧ್ವನಿಯಲ್ಲಿ ಹೇಳುತ್ತಾರೆ. ನಂತರ ನರೇಂದ್ರ ತನ್ನ ಜೊತೆಯವರೊಡನೆ ಹೊರಗೆ ಬರುತ್ತಾ, "ಇಂದು ನಾನು ಹೊಸ ಶಿಕ್ಷಣವೊಂದನ್ನು ಕಲಿತೆ. ಬದುಕಿದ್ದರೆ ಇಡೀ ವಿಶ್ವಕ್ಕೆ ಈ ಸಂದೇಶವನ್ನು ಸಾರಿ ಕಾರ್ಯರೂಪಕ್ಕೆ ತರುತ್ತೇನೆ" ಎಂದನು. ಅಂದು ಆಡಿದ ಮಾತನ್ನು, ಗುರುವಿನ ಆದೇಶವನ್ನು ಜಗತ್ತಿನಾದ್ಯಂತ ಹರಡಿದವರು ವಿಶ್ವವಿಖ್ಯಾತ ವೀರಸಂನ್ಯಾಸಿ ಸ್ವಾಮಿ ವಿವೇಕಾನಂದರು! ಪೂರ್ವಾಶ್ರಮದ ನರೇಂದ್ರನಾಥ ದತ್ತ!

ದಕ್ಷಿಣ ಭಾರತದ ರಾಮಕೃಷ್ಣ ಆಂದೋಲನದ ಮಾತೃಸಂಸ್ಥೆ ಚೆನ್ನೈನ ಶ್ರೀರಾಮಕೃಷ್ಣ ಮಠ. ಆಧ್ಯಾತ್ಮಿಕ ಚಟುವಟಿಕೆಗಳೊಂದಿಗೆ ಇದು ನಡೆಸುತ್ತಿರುವ ಸೇವಾಕಾರ್ಯಗಳೂ ಹಲವಾರು. ಇದರ ಪಕ್ಷಿನೋಟವನ್ನು ನೀಡಿರುವ ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಈ ಪತ್ರಿಕೆಗೆ ಹಲವಾರು ಲೇಖನಗಳನ್ನು ಬರೆದಿರುವ ಇವರು, ಕೆಲವು ಪುಸ್ತಕಗಳನ್ನೂ ರಚಿಸಿದ್ದಾರೆ.

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಅವರ ಆಪ್ತಶಿಷ್ಯರು ಸಂನ್ಯಾಸ ದೀಕ್ಷೆಯನ್ನು ಸ್ವೀಕರಿಸಿದರು; ಕೊಲ್ಕತ್ತದ ಬಾರಾನಗರದಲ್ಲಿ ಪಾಳು ಮನೆಯೊಂದನ್ನು ಬಾಡಿಗೆಗೆ ಪಡೆದು, ಅಲ್ಲಿ ಶ್ರೀರಾಮಕೃಷ್ಣರ ಅಸ್ಥಿಯನ್ನು ಪ್ರತಿಷ್ಠಾಪಿಸಿ ಮಠದ ಸ್ಥಾಪನೆ ಮಾಡಿದರು. ಆಗ ಅವರಿಗೆಲ್ಲ ಕೇವಲ ದೈವಸಾಕ್ಷಾತ್ಕಾರವೊಂದೇ ಗುರಿಯಾಗಿತ್ತು. ಜಪ-ತಪ ಸಾಧನೆಗಳೇ ಎಲ್ಲವೂ ಆಗಿತ್ತು. ಸ್ವಾಮಿ ರಾಮಕೃಷ್ಣಾನಂದರು ಗುರುದೇವರ ಆರಾಧನೆಯನ್ನೇ ತಪಸ್ಸನ್ನಾಗಿಸಿಕೊಂಡಿದ್ದರು. ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಭಾರತದ ಪರ್ಯಟನ ಕೈಗೊಂಡು ದಕ್ಷಿಣಭಾರತದ ತುತ್ತತುದಿಗೆ, ಕನ್ಯಾಕುಮಾರಿಗೆ ಬಂದರು. ಕಡಲತಡಿಯಲ್ಲಿ ನಿಂತು, ಸಮುದ್ರ ಮಧ್ಯದಲ್ಲಿದ್ದ ಹೆಬ್ಬಂಡೆಯೊಂದನ್ನು ನೋಡಿದರು. ಮನ ಸೆಳೆಯಿತು. ಈಜಿಕೊಂಡು ಆ ಬಂಡೆಯನ್ನು ತಲುಪಿದರು, ಏರಿದರು. ಕುಳಿತು ಧ್ಯಾನಸ್ಥರಾದರು. ಕಾಲದ ಪರಿವೆ ಇಲ್ಲ. ಧ್ಯಾನಸ್ಥಿತಿಯಲ್ಲಿ ಭಾರತದ ಸ್ಪಷ್ಟ ಚಿತ್ರ ಕಣ್ಣ ಮುಂದೆ ಕಾಣಿಸುತ್ತಿತ್ತು. ಕಿವಿಯಲ್ಲಿ ಗುರುವಿನ ಆದೇಶವಾಣಿ ಮೊಳಗುತ್ತಿತ್ತು. ಎಚ್ಚೆತ್ತ ನಂತರ ಸ್ವಾಮೀಜಿಯವರು ತಮ್ಮ ಮುಂದಿನ ನಿಲುವನ್ನು ನಿಶ್ಚಯಿಸಿದರು. 'ಶಿವಜ್ಞಾನೇ ಜೀವಸೇವಾ' ಹಾಗೂ ರಾಷ್ಟ್ರ ದೇವತೆಯ ಆರಾಧನೆಗೆ ಸಂಕಲ್ಪ ಮಾಡಿದರು; ಸ್ವ-ಮುಕ್ತಿಯತ್ತ ನಿರ್ಲಕ್ಷರಾದರು.

ಅಲ್ಲಿಂದ ಹೊರಟು ಸಂಚರಿಸುತ್ತ ಚೆನ್ನೈ ನಗರದ ನೆಲದಲ್ಲಿ ೧೮೯೩ನೇ ಜನವರಿಯಲ್ಲಿ ಹೆಜ್ಜೆಯನ್ನಿಟ್ಟರು. ಸ್ವಾಮೀಜಿಯವರ ತೇಜಃಪುಂಜ ವ್ಯಕ್ತಿತ್ವ, ಗಂಭೀರವಾಣಿ ಹಲವಾರು ತರುಣರನ್ನು ಆಕರ್ಷಿಸಿತು. ಸ್ವಾಮೀಜಿಯವರ ಉದ್ದೇಶಿತ ಸಂಕಲ್ಪಕ್ಕೆ ಅವರೆಲ್ಲ ಬೆನ್ನೆಲುಬಾಗಿ ನಿಂತರು. ಅಮೆರಿಕಾದ ಚಿಕಾಗೋದಲ್ಲಿ ನಡೆಯಲಿರುವ 'ಸರ್ವಧರ್ಮಸಮ್ಮೇಳನ'ಕ್ಕೆ ಭಾರತೀಯ ಪ್ರತಿನಿಧಿಯಾಗಿ ಹೋಗಲೇಬೇಕೆಂದು ಒತ್ತಾಯಿಸಿ, ಅದಕ್ಕೆ ತಗಲುವ ವೆಚ್ಚವೆಲ್ಲವನ್ನು ತಾವೇ ವಹಿಸಿಕೊಳ್ಳುವುದಾಗಿ ಭರವಸೆ ನೀಡಿದರು. ಅದಕ್ಕೂ ಮುನ್ನ ಭಾರತ ಪರ್ಯಟನೆಯ ಸಮಯದಲ್ಲಿ ಕೆಲವು ಗಣ್ಯಾತಿಗಣ್ಯರೂ ಈ ಕೆಲಸಕ್ಕೆ ತಮ್ಮ ಪ್ರೋತ್ಸಾಹ, ಬೆಂಬಲವನ್ನು ಸೂಚಿಸಿದ್ದರು. ಭಗವಾನ್ ಬುದ್ಧ ಧರ್ಮ ಪ್ರವರ್ತಕನಾದಂತೆ ಸ್ವಾಮೀಜಿ ಸೇವಾಪ್ರವರ್ತಕರಾದರು. ಇದಕ್ಕೆ ಪೂರ್ಣ ಸಹಕಾರ ದೊರೆತದ್ದು ಚೆನ್ನೈನಲ್ಲಿಯೇ ಎಂಬುದು ಗಮನಾರ್ಹ. ೧೮೯೩ರಿಂದ ೧೮೯೭ರವರೆಗೆ ಪಾಶ್ಚಾತ್ಯದೇಶದಲ್ಲಿ ಭಾರತದ ಸನಾತನ ಧರ್ಮ ಮತ್ತು ಸಂಸ್ಕೃತಿಯ ಪ್ರಚಾರಕರಾಗಿ ಸಂಚರಿಸುತ್ತಿದ್ದರೂ, ಪತ್ರಮುಖೇನ ಚೆನ್ನೈನ ಭಕ್ತರ ಸಂಪರ್ಕ ನಿರಂತರವಾಗಿತ್ತು. ತಮ್ಮ ವಿಚಾರಧಾರೆಯನ್ನು ತಿಳಿಸುತ್ತಾ ಭಕ್ತರನ್ನು ಜಾಗೃತಗೊಳಿಸುತ್ತಿದ್ದರು. ಸ್ವಾಮೀಜಿಯವರ ಕಟ್ಟಾ ಅನುಯಾಯಿಯಾದ ಶ್ರೀ ಅಳಸಿಂಗ ಪೆರುಮಾಳ್ ಅವರು 'ಬ್ರಹ್ಮವಾದಿನ್' ಎಂಬ ಆಂಗ್ಲ ಪತ್ರಿಕೆಯನ್ನು ಆರಂಭಿಸಿದರು. ಸ್ವಾಮೀಜಿಯವರ ಸ್ಫೂರ್ತಿಯುತ ಲೇಖನಗಳು ಇದರ ಮುಖಾಂತರ ಜನರನ್ನು ಬಡಿದೆಬ್ಬಿಸುತ್ತಿದ್ದವು. ಇದೇ ಪತ್ರಿಕೆ ಮುಂದೆ ೧೯೧೪ರಲ್ಲಿ 'ವೇದಾಂತ ಕೇಸರಿ' ಎಂಬ ಹೆಸರಿನಲ್ಲಿ ಪ್ರಕಟವಾಗತೊಡಗಿತು. ಇಂದಿಗೂ ಅದು ತನ್ನ ಶ್ರೇಷ್ಠತೆಯನ್ನು ಉಳಿಸಿಕೊಂಡು ಜನಮನಕ್ಕೆ ತಲುಪುತ್ತಿದೆ.

೧೮೯೭ನೇ ಫೆಬ್ರವರಿಯಲ್ಲಿ ಸ್ವಾಮೀಜಿಯವರು ಭಾರತಕ್ಕೆ ಹಿಂದಿರುಗಿದಾಗ, ಅಲ್ಲಿಯ ಜನರು ವಿಶ್ವವಿಖ್ಯಾತ ವೀರ ಸಂನ್ಯಾಸಿಗೆ ಅದ್ಭುತ ಸ್ವಾಗತವಿತ್ತು ಬರಮಾಡಿಕೊಂಡರು. ಚೆನ್ನೈಗೆ ದಯಮಾಡಿದಾಗ ಆತ್ಮೀಯವಾಗಿ ವೈಭವಯುತವಾದ ಮೆರವಣಿಗೆಯೊಂದಿಗೆ ಸಾವಿರಾರು ಅಭಿಮಾನಿಗಳು ಕರೆತಂದು ಶ್ರೀ ಬಿಳಿಗಿರಿ ಅಯ್ಯಂಗಾರ್ ಅವರ ಬಂಗಲೆ 'ಕ್ಯಾಸೆಲ್ ಕರ್ನನ್'ನಲ್ಲಿ ಬಿಡಾರ ಮಾಡಿಸಿದರು. ಇಲ್ಲಿ ಒಂಬತ್ತು ದಿನಗಳು ತಂಗಿದ್ದು, ಆ ಅವಧಿಯಲ್ಲಿ ಚೆನ್ನೈ ನಗರದ ಹಲವು ಭಾಗಗಳಲ್ಲಿ ಸ್ವಾಮೀಜಿಯವರು ನೀಡಿದ ಭಾಷಣಗಳು ಅತ್ಯಂತ ಶ್ರೇಷ್ಠಮಟ್ಟದ್ದಾಗಿದ್ದವು. ಈ ಸಂದರ್ಭದಲ್ಲಿ ಚೆನ್ನೈನ ಭಕ್ತರು ಮತ್ತು ಅಭಿಮಾನಿಗಳು, ರಾಮಕೃಷ್ಣ ಮಠದ ಶಾಖಾ ಕೇಂದ್ರವೊಂದನ್ನು ಶಾಶ್ವತವಾಗಿ ಚೆನ್ನೈನಲ್ಲಿ ತೆರೆಯಬೇಕೆಂದು ಸ್ವಾಮೀಜಿಯವರಲ್ಲಿ ಮನವಿ ಸಲ್ಲಿಸಿದರು. ಸ್ವಾಮೀಜಿಯವರು ಅತ್ಯಂತ ಸಂತೋಷದಿಂದ ಒಪ್ಪಿಗೆ ನೀಡಿ, "ಕಟ್ಟಾ ಸಂಪ್ರದಾಯಸ್ಥರೂ, ಶ್ರೀರಾಮಕೃಷ್ಣರ ಆಪ್ತಶಿಷ್ಯರೂ ಆದ ಸಾಧುಗಳೊಬ್ಬರನ್ನು ಕಳುಹಿಸುತ್ತೇನೆ" ಎಂದು ಹೇಳಿದರು.

ಚೆನ್ನೈನಿಂದ ಕೊಲ್ಕತಾ ತಲುಪಿದ ನಂತರ, ಮಾತು ಕೊಟ್ಟಿದ್ದಂತೆ ತಮ್ಮ ಸಂನ್ಯಾಸಿ ಸೋದರರೊಬ್ಬರನ್ನು ಚೆನ್ನೈಗೆ ಕಳುಹಿಸಿದರು. ಯಾರವರು? ಶ್ರೀರಾಮಕೃಷ್ಣರ ಭಾವಚಿತ್ರದೊಂದಿಗೆ ಆನಂದವನ್ನೂ ಹೊತ್ತು ತಂದ ಅವರೇ ಪರಮ ಪೂಜ್ಯ ಸ್ವಾಮಿ ರಾಮಕೃಷ್ಣಾನಂದರು! ದಕ್ಷಿಣ ಭಾರತದ ಮೊಟ್ಟ ಮೊದಲನೆಯ ಹಾಗೂ ರಾಮಕೃಷ್ಣ ಮಹಾಸಂಘದ ಎರಡನೆಯ ಮಠವೆಂಬ ಹೆಗ್ಗಳಿಕೆಗೆ ಪಾತ್ರವಾದ ಚೆನ್ನೈ ಶ್ರೀರಾಮಕೃಷ್ಣ ಮಠದ ಸ್ಥಾಪಕರು ಎಂದು ಅವರು ಪೂಜನೀಯರಾದರು. ಕಾಕತಾಳೀಯವೆಂಬಂತೆ ಕೊಲ್ಕತಾದಲ್ಲಿ ಶ್ರೀರಾಮಕೃಷ್ಣರು; ಚೆನ್ನೈನಲ್ಲಿ ಅವರ ಪರಂಪರೆಯ ಸ್ವಾಮಿ ರಾಮಕೃಷ್ಣಾನಂದರು!

ಸ್ವಾಮಿ ರಾಮಕೃಷ್ಣಾನಂದರು ತಮ್ಮ ಗುರುದೇವರನ್ನು ಪ್ರತ್ಯಕ್ಷವಾಗಿ ಭಾವಚಿತ್ರದಲ್ಲಿ ಕಾಣುತ್ತಿದ್ದರು. ತಾವು ಮಾಡುವ ಪ್ರತಿ ಕೆಲಸವೂ ಗುರುಸೇವೆಯೇ ಎಂಬ ವಿಶ್ವಾಸ ಉಳ್ಳವರು ಅವರು. ಅವರಿಗೆ ಇದೇ ಜಪ-ತಪ-ಸಾಧನೆ ಎಲ್ಲವೂ!

೧೮೯೭ರಲ್ಲಿ ಚೆನ್ನೈಗೆ ಬಂದ ಸ್ವಾಮಿ ರಾಮಕೃಷ್ಣಾನಂದರು ಮೊದಲು ಕೆಲವು ದಿನಗಳು ಒಂದು ಬಾಡಿಗೆಯ ಮನೆಯಲ್ಲಿ ಶ್ರೀರಾಮಕೃಷ್ಣರನ್ನು ನೆಲೆಗೊಳಿಸಿದ್ದರು. ನಂತರ ಹಿಂದೆ ಸ್ವಾಮಿ ವಿವೇಕಾನಂದರು ತಂಗಿದ್ದ 'ಕ್ಯಾಸೆಲ್ ಕರ್ನನ್'ಗೆ ಬಂದು, ಅಲ್ಲಿ ಶ್ರೀರಾಮಕೃಷ್ಣರನ್ನು ಪ್ರತಿಷ್ಠಾಪಿಸಿ, ಶ್ರೀರಾಮಕೃಷ್ಣ ಮಠವನ್ನು ಸ್ಥಾಪಿಸಿದರು. ೧೮೯೭ನೇ ಇಸವಿ ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ ಸ್ಥಾಪನೆಯಾದ ಈ ಮಠವು ಸ್ವಾಮಿ ರಾಮಕೃಷ್ಣಾನಂದರ ತ್ಯಾಗ, ಸೇವೆ, ಪರಿಶ್ರಮಗಳ ಫಲವಾಗಿ, ಇಂದು ಬೃಹದಾಕಾರವಾಗಿ ಬೆಳೆದಿದೆ. ರಾಮಕೃಷ್ಣ ಮಹಾಸಂಘದ

ಧ್ಯೇಯಕ್ಕೆ ಅನುಗುಣವಾಗಿ ಬೆಳೆದಿರುವ, ಬೆಳೆಯುತ್ತಿರುವ ದಕ್ಷಿಣ ಭಾರತದ ಶಾಖಾ ಕೇಂದ್ರಗಳ ಮಾತೃಸಂಸ್ಥೆಯೆಂಬ ವಿಶೇಷತೆಗೆ ಪಾತ್ರವಾಗಿದೆ.

ಎಡರುತೊಡರುಗಳಿಲ್ಲದೆ ಸುಸೂತ್ರವಾಗಿ ಯಾವ ಕೆಲಸವೂ ಸಾಗುವುದಿಲ್ಲ. ೧೯೦೬ರಲ್ಲಿ ಈ ಕಟ್ಟಡವನ್ನು ಬಿಡಬೇಕಾದ ಪರಿಸ್ಥಿತಿಯೊದಗಿ, ಒಂದು ಸಣ್ಣ ಮನೆಯೊಂದಕ್ಕೆ ಮಠವನ್ನು ವರ್ಗಾಯಿಸಲಾಯಿತು. ಸ್ವಾಮಿಗಳು ಸ್ಥಿತಪ್ರಜ್ಞರಂತೆ, ಸಾವಧಾನಚಿತ್ತರಾಗಿ ಗುರುದೇವರಲ್ಲಿ ನಂಬಿಕೆಯಿಟ್ಟು ತಮ್ಮ ಸೇವಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಪ್ರಚಾರ ಕಾರ್ಯಕ್ಕಾಗಿ ನಗರದ ನಾನಾ ಭಾಗಗಳಿಗೆ ತೆರಳಿ ಉಪನ್ಯಾಸಗಳನ್ನು ನೀಡುತ್ತಿದ್ದರು. ದೈಹಿಕಶ್ರಮಕ್ಕೆ ಗಮನವಿತ್ತವರೇ ಅಲ್ಲ. ಭಕ್ತರ ಪ್ರಾರ್ಥನೆಗೆ ಮರುಗದ ಭಗವಂತನುಂಟೆ! ಕೊಂಡಯ್ಯ ಚೆಟ್ಟಿ ಎನ್ನುವ ಭಕ್ತರೊಬ್ಬರು ಮೈಲಾಪುರದಲ್ಲಿ ಶ್ರೀರಾಮಕೃಷ್ಣ ಮಠಕ್ಕೆಂದು ಜಾಗವೊಂದನ್ನು ದಾನ ಮಾಡಿದರು. ಮನೆಮನೆಗೂ ಹೋಗಿ ಚಂದಾ ಎತ್ತಿ, ಒಂದು ಮಹಡಿಯ ಸಣ್ಣ ಕಟ್ಟಡವೊಂದನ್ನು ಸ್ವಾಮಿ ರಾಮಕೃಷ್ಣಾನಂದರು ಕಟ್ಟಿಸಿ, ಅಲ್ಲಿ ಗುರುದೇವರನ್ನು ಪ್ರತಿಷ್ಠಾಪಿಸಿದರು. ಮಠದ ಕಾರ್ಯಕಲಾಪಗಳು ಸುಗಮವಾಗತೊಡಗಿತು ಎನ್ನುವಷ್ಟರಲ್ಲಿ, ಇನ್ನೊಂದು ತರಹ ತೊಂದರೆ ಆರಂಭವಾಯಿತು. ಅಲ್ಪಕಾಲದಲ್ಲಿಯೇ ಆ ಕಟ್ಟಡ ಶಿಥಿಲವಾಗತೊಡಗಿತು. ಅಂತೆಯೇ ಸ್ವಾಮಿ ರಾಮಕೃಷ್ಣಾನಂದರ ಶರೀರವೂ ಪ್ರಕೃತಿಸಹಜವಾಗಿ ರೋಗಕ್ಕೆ ತುತ್ತಾಯಿತು. ೧೯೧೧ರಲ್ಲಿ ಕೊಲ್ಕತಾದಲ್ಲಿ ಅವರು ಮಹಾಸಮಾಧಿಯನ್ನು ಹೊಂದಿದರು. ಅವರು ತಮ್ಮ ಸೇವಾವಧಿಯ ಕಾಲದಲ್ಲಿ ದಕ್ಷಿಣ ಭಾರತದಲ್ಲೆಲ್ಲ ಸಂಚರಿಸಿ, ಅಲ್ಲಲ್ಲಿ ಪ್ರಚಾರ, ಪ್ರವಚನಗಳಿಂದ ಜನಜಾಗೃತಿಯುಂಟುಮಾಡಿ, ರಾಮಕೃಷ್ಣ ಆಂದೋಲನವನ್ನು ಕೈಗೊಂಡಿದ್ದರು. ಇವರ ಪರಿಶ್ರಮದಿಂದಾಗಿ ಹಲವು ಕಡೆ ರಾಮಕೃಷ್ಣ ಮಠಗಳ ಸ್ಥಾಪನೆ ಆಯಿತು. ಕರ್ನಾಟಕದಲ್ಲಿ ಬೆಂಗಳೂರಿನ ಮಠಸ್ಥಾಪನೆಗೂ ಇವರೇ ಕಾರಣಕರ್ತರು.

ಅವರು ನೆಟ್ಟ ಬೀಜ ಮೊಳಕೆಯೊಡೆದು ಚಿಗುರಿ ಬೆಳೆಯಲಾರಂಭಿಸಿತು. ಸ್ವಾಮಿ ರಾಮಕೃಷ್ಣಾನಂದರಿಂದ ತರಬೇತಿ ಪಡೆದ, ಪೂಜ್ಯ ಸ್ವಾಮಿ ಬ್ರಹ್ಮಾನಂದರ ಶಿಷ್ಯರಾದ ಸ್ವಾಮಿ ಶರ್ವಾನಂದರು ಮಠದ ಅಧ್ಯಕ್ಷರಾಗಿ ಸೇವಾಪ್ರವೃತ್ತರಾದರು. ಶಿಥಿಲವಾದ ಕಟ್ಟಡದ ಬಳಿಯೇ ಇನ್ನೊಂದು ಹೊಸ ಕಟ್ಟಡವನ್ನು ಕಟ್ಟಿ, ೧೯೧೭ನೇ ಏಪ್ರಿಲ್ ೨೭ರಂದು, ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ಬ್ರಹ್ಮಾನಂದರಿಂದ ಉದ್ಘಾಟನೆ ಮಾಡಿಸಿದರು. ಪ್ರಾರ್ಥನಾ ಮಂದಿರದ ಜೊತೆಗೆ ಸಾಧು ನಿವಾಸವೂ ಅನಾವರಣಗೊಂಡಿತು. ಈಗ ಇದನ್ನು 'ಹಳೆಯ ದೇವಾಲಯ' ಎಂದು ಕರೆಯುತ್ತಾರೆ. ಇದಲ್ಲದೆ, ಶ್ರೀಮಾತೆ ಶಾರದಾದೇವಿ, ಬ್ರಹ್ಮಾನಂದಜಿ, ಪ್ರೇಮಾನಂದಜಿ, ಶಿವಾನಂದಜಿ, ಅಭೇದಾನಂದಜಿ ಹಾಗೂ ವಿಜ್ಞಾನಾನಂದಜಿ ಮುಂತಾದ ಶ್ರೀರಾಮಕೃಷ್ಣರ ನೇರಶಿಷ್ಯರ ಪಾದಧೂಳಿಯಿಂದ ಪುನೀತವಾದ ಚೆನ್ನೈ ಮಠವು ತೀರ್ಥಕ್ಷೇತ್ರವಾಗಿದೆ.

ಸ್ವಾಮಿ ಶರ್ವಾನಂದರ ತರುವಾಯ ಕ್ರಮವಾಗಿ ಸ್ವಾಮಿ ಯತೀಶ್ವರಾನಂದಜಿ, ಸ್ವಾಮಿ ಅಮೃತೇಶ್ವರಾನಂದಜಿ, ಸ್ವಾಮಿ ಶಾಶ್ವತಾನಂದಜಿ, ಸ್ವಾಮಿ ಕೈಲಾಸಾನಂದಜಿ, ಸ್ವಾಮಿ ತಪಸ್ಯಾನಂದಜಿ ಮತ್ತು ಸ್ವಾಮಿ ಸ್ಮರಣಾನಂದಜಿಯವರು ಮಠದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, ಚೆನ್ನೈ ಮಠವನ್ನು ಪ್ರಗತಿಪಥದತ್ತ ಕೊಂಡೊಯ್ದಿದ್ದಾರೆ. ಈಗ ಸ್ವಾಮಿ ಗೌತಮಾನಂದಜಿಯವರು ಅಧ್ಯಕ್ಷರಾಗಿ ಮಠದ ಸರ್ವತೋಮುಖ ಉನ್ನತಿಗೆ ಶ್ರಮಿಸುತ್ತಿದ್ದಾರೆ. ಸ್ವಾಮಿ ರಾಮಕೃಷ್ಣಾನಂದರಿಂದ ಕಾರ್ಯ ಚಟುವಟಿಕೆಗಳೆಲ್ಲ ಪ್ರಾರಂಭವಾಗಿದ್ದು, ಅವು ವಿಸ್ತರಿಸುತ್ತಲೇ ಮುನ್ನಡೆದಿವೆ. ಎಲ್ಲ ಯತಿವರ್ಯರ ತ್ಯಾಗ, ಸೇವೆಗಳಿಂದ ಮಠದ ಹಿರಿಮೆ ವೃದ್ಧಿಯಾಗುತ್ತಲೇ ಇದೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಸ್ವಾಮಿ ವಿವೇಕಾನಂದರು ಚೆನ್ನೈನಲ್ಲಿ 'ವಿಶ್ವಭಾವೈಕ್ಯ ಮಂದಿರ'ವೊಂದನ್ನು ಸ್ಥಾಪಿಸಬೇಕೆಂಬ ಆಸೆಯನ್ನು ಹೊಂದಿದ್ದರು. ಅವರ ಅಭಿಲಾಷೆ ಕ್ರಿ.ಶ. ೨೦೦೦ದ ಫೆಬ್ರವರಿ ೭ನೇ ದಿನಾಂಕದಂದು ಈಡೇರಿತು. ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ರಂಗನಾಥನಂದಜಿ ಮಹಾರಾಜ್ ಅವರಿಂದ ಲೋಕಾರ್ಪಣೆ ಆಯಿತು. ಈ ಭವ್ಯ ಮಂದಿರವು ದಿವ್ಯತ್ರಯರ ಸಾನ್ನಿಧ್ಯದಿಂದ ಪುನೀತವಾಗಿದೆ; ಪವಿತ್ರ ವಾತಾವರಣದಿಂದ ಕೂಡಿದೆ. ಪ್ರಾರ್ಥನಾ ಮಂದಿರದಲ್ಲಿ ಸ್ವಲ್ಪ ಕಾಲ ಕುಳಿತರೂ ಸಾಕು, ಮನಸ್ಸಿಗೆ ನೆಮ್ಮದಿ, ಶಾಂತಿ ಸಿಗುವುದು. ಈ ದಿವ್ಯ, ಭವ್ಯ ಮಂದಿರವು ರಾಮಕೃಷ್ಣ ಮಹಾಸಂಘದ ಧ್ಯೇಯ, ಆದರ್ಶಗಳಿಗೆ ಅನುಗುಣವಾಗಿ ಸಾಂಪ್ರದಾಯಿಕ ರೀತಿಯಲ್ಲಿ ಕಲಾತ್ಮಕವಾಗಿ ನಿರ್ಮಾಣವಾಗಿದೆ. ದಿವ್ಯತ್ರಯರ ಕೃಪೆಯಿಂದ ಆಶ್ರಮದ ಕಾರ್ಯಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಈಗ ಚೆನ್ನೈನ ಶ್ರೀರಾಮಕೃಷ್ಣ ಮಠದಿಂದ ನಡೆಯುತ್ತಿರುವ ಸೇವಾಕಾರ್ಯಗಳ ಸ್ಥೂಲ ಪರಿಚಯ ಮಾಡಿಕೊಳ್ಳೋಣ.

ಪೂಜೆ: ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಸ್ವಾಮಿ ರಾಮಕೃಷ್ಣಾನಂದರು ಗುರುದೇವರ ಪೂಜೆಯನ್ನು ಸಾಂಪ್ರದಾಯಿಕವಾಗಿ ನಿಯಮಬದ್ಧ ರೀತಿಯಲ್ಲಿ ಪ್ರಾರಂಭಿಸಿದರು. ಆ ಪದ್ಧತಿಯು ಎಲ್ಲಾ ರಾಮಕೃಷ್ಣ ಮಠಗಳಲ್ಲೂ ವಿಧ್ಯುಕ್ತವಾಗಿ ನಡೆಯುತ್ತಿದೆ. ಗುರುದೇವರ ಸನ್ನಿಧಿಯೇ ಮಠದ ಎಲ್ಲ ಕಾರ್ಯಚಟುವಟಿಕೆಗಳಿಗೂ ಕೇಂದ್ರ ಬಿಂದು. ಚೆನ್ನೈ ಮಠದಲ್ಲಿಯೂ ಸಹ ಇದು ನಿಯಮಿತವಾಗಿ ನಡೆಯುತ್ತಿದೆ. ಸಂಧ್ಯಾರತಿ, ಉತ್ಸವಗಳ ಆಚರಣೆ (ದಿವ್ಯತ್ರಯರ ಜನ್ಮೋತ್ಸವ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಬುದ್ಧ, ಏಸುಕ್ರಿಸ್ತರ ಜನ್ಮದಿನಗಳು, ಶ್ರೀರಾಮಕೃಷ್ಣರ ನೇರ ಶಿಷ್ಯರುಗಳ ಜನ್ಮದಿನಗಳು, ಶಿವರಾತ್ರಿ, ರಾಮನವಮಿ, ಕೃಷ್ಣಾಷ್ಟಮಿ, ದುರ್ಗಾ ಪೂಜೆ, ಕಾಳಿಪೂಜೆ ಇತ್ಯಾದಿ) ನಿಯಮಿತವಾಗಿ ನಡೆಯತ್ತಿವೆ. ಪ್ರತಿ ಏಕಾದಶಿಯಂದು ರಾಮನಾಮ ಸಂಕೀರ್ತನೆ, ಭಜನೆಗಳು ನಡೆಯುತ್ತವೆ. ಆಗಾಗ ಜಪಯಜ್ಞ, ಅಧ್ಯಾತ್ಮ ಶಿಬಿರಗಳೂ ಜರುಗುತ್ತವೆ. ಪ್ರತಿ ಶನಿವಾರ, ಭಾನುವಾರಗಳಂದು ಇಂಗ್ಲಿಷ್ ಹಾಗೂ ತಮಿಳು ಭಾಷೆಗಳಲ್ಲಿ ಪ್ರವಚನ ಕಾರ್ಯಕ್ರಮಗಳು ನಡೆಯುತ್ತವೆ.

ತರಬೇತಿ ಕೇಂದ್ರ : ಚೆನ್ನೈ ರಾಮಕೃಷ್ಣ ಮಠವು, ರಾಮಕೃಷ್ಣ ಮಹಾಸಂಘಕ್ಕೆ ಸೇರಿ, ಸಂನ್ಯಾಸ ದೀಕ್ಷೆ ಪಡೆದು ಸೇವೆ ಸಲ್ಲಿಸುವ ಅಭಿಲಾಷೆಯುಳ್ಳ ಯುವಕರಿಗೆ, ಸಂಘದ ನಿಯಮದಂತೆ ತರಬೇತಿ ನೀಡುವ ಮೂಲಕ ನಿಷ್ಠಾವಂತ ಸಾಧುಗಳನ್ನು ಉತ್ತಮ ಮಾರ್ಗದರ್ಶನದಲ್ಲಿ ಮುನ್ನಡೆಸುವ ಕೇಂದ್ರವೂ ಆಗಿದೆ (ಎಲ್ಲಾ ಮಠಗಳಲ್ಲೂ ಈ ಸೌಲಭ್ಯವಿದೆ). ಮಠದ ಸಾಧುಗಳು ಪ್ರವಚನಗಳನ್ನು ಆವಶ್ಯಕತೆ ಇದ್ದಲ್ಲೆಲ್ಲ ಸಂಚರಿಸಿ ನಡೆಸುತ್ತಾರೆ. ೨೦೦೪ರಿಂದ **'ವಿವೇಕ ಮುರುಸು'** (ವಿವೇಕಾನಂದ ಕಹಳೆ) ಎಂಬ ಸಂಚಾರಿ ಪ್ರಚಾರಾಂದೋಲನದ ಮೂಲಕ, ಹಳ್ಳಿಹಳ್ಳಿಗಳಲ್ಲೂ ಪ್ರಚಾರ, ದರಿದ್ರನಾರಾಯಣ ಸೇವೆ, ವಿದ್ಯಾಪ್ರಚಾರ ಕಾರ್ಯ ನಡೆಯುತ್ತಿದೆ.

ಶೈಕ್ಷಣಿಕ ಕಾರ್ಯ : ೧೯೦೬ ರಲ್ಲಿ ಸ್ವಾಮಿ ರಾಮಕೃಷ್ಣಾನಂದರಿಂದ ಸ್ಥಾಪಿಸಲ್ಪಟ್ಟ ನ್ಯಾಷನಲ್ ಶಾಲೆ (೩ರಿಂದ ೫ನೇ ತರಗತಿ) ವಿದ್ಯಾರ್ಥಿ / ನಿಯರಿಗೆ ತಮಿಳು ಹಾಗೂ ತೆಲುಗು ಭಾಷಾ ಮಾಧ್ಯಮಗಳಲ್ಲಿ ಶಿಕ್ಷಣ ನೀಡುತ್ತಿದೆ. ವಿವೇಕಾನಂದ ಶತಮಾನೋತ್ಸವ ಬಾಲಕಿಯರ ಪ್ರೌಢಶಾಲೆ ೧೯೬೨ರಲ್ಲಿ ಸ್ಥಾಪನೆಯಾಗಿದೆ. ಇವೆರಡೂ ಶಾಲೆಗಳು ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾಗಿವೆ. ಸ್ವಾಮಿ ರಾಮಕೃಷ್ಣಾನಂದರ ಇಬ್ಬರು ಭಕ್ತರ ಪರಿಶ್ರಮದ ಫಲವಾಗಿ, ೧೯೦೫ರಲ್ಲಿ ಸ್ವಾಮಿಗಳಿಂದ ಅನಾಥ ಬಾಲಕರಿಗಾಗಿ ಸ್ಥಾಪಿತವಾದ ವಿದ್ಯಾರ್ಥಿ ನಿಲಯ ಇಂದು 'ರಾಮಕೃಷ್ಣ ಮಿಷನ್ ಸ್ಟೂಡೆಂಟ್ಸ್ ಹೋಂ' ಎಂಬ ಹೆಸರಿನಿಂದ ಸುಮಾರು ನಾನೂರಕ್ಕೂ ಹೆಚ್ಚು, ನಿರ್ಗತಿಕ ಬಡ ವಿದ್ಯಾರ್ಥಿಗಳಿಗೆ ಆಸರೆಯನ್ನು ನೀಡುತ್ತಿದೆ. ಚೆನ್ನೈ ನಗರದ 'ರಾಮಕೃಷ್ಣ ಮಿಷನ್ ವಿವೇಕಾನಂದ ಕಾಲೇಜು' ದೇಶಾದ್ಯಂತ ಹೆಸರುಗಳಿಸಿರುವ ವಿದ್ಯಾಸಂಸ್ಥೆ. ಹೆಣ್ಣು ಮಕ್ಕಳಿಗಾಗಿಯೇ 'ಶ್ರೀಶಾರದಾ ವಿದ್ಯಾಲಯ' ಎಂಬ ಶಿಕ್ಷಣಸಂಸ್ಥೆ ನಡೆಯುತ್ತಿದೆ. ಇದಲ್ಲದೆ ಹಲವಾರು ಶಾಲೆಗಳ ಮೂಲಕವೂ ಉತ್ತಮ ವಿದ್ಯಾಭ್ಯಾಸ ನೀಡುವ ಕಾರ್ಯ ನಡೆಯುತ್ತಿದೆ.

ಚೆನ್ನೈ ಶ್ರೀರಾಮಕೃಷ್ಣ ಮಠದಲ್ಲಿ ಇರುವ ಶ್ರೀರಾಮಕೃಷ್ಣ ಶತಮಾನೋತ್ಸವ ಗ್ರಂಥಾಲಯದಲ್ಲಿ, ತಮಿಳು, ತೆಲುಗು, ಕನ್ನಡ, ಮಲಯಾಳಂ, ಹಿಂದಿ, ಬಂಗಾಳಿ ಹಾಗೂ ಇಂಗ್ಲೀಷ್ ಭಾಷೆಗಳ ಬೃಹತ್ ಪುಸ್ತಕ ಸಂಗ್ರಹವಿದೆ. ಕಾಲೇಜು ವಿದ್ಯಾರ್ಥಿಗಳಿಗೆ 'ಬುಕ್ ಬ್ಯಾಂಕ್' ಸೌಕರ್ಯವೂ ಇದೆ.

ಪ್ರಕಾಶನ ಕೇಂದ್ರ : ಸ್ವಾಮಿ ರಾಮಕೃಷ್ಣಾನಂದರಿಂದ ಪ್ರಾರಂಭವಾದ ಪ್ರಕಟನ ಕಾರ್ಯ ಇಂದು ಬೃಹತ್ತಾಗಿ ಬೆಳೆದಿದೆ. ವಿಶ್ವಪ್ರಸಿದ್ಧವಾದ 'Gospel of Ramakrishna' ಹಾಗೂ 'Sri Ramakrishna, The Great Master' ಗ್ರಂಥಗಳನ್ನು ಲೋಕಾರ್ಪಣೆ ಮಾಡಿದ ಹೆಗ್ಗಳಿಕೆ ಈ ಮಠದ್ದು. ರಾಮಕೃಷ್ಣ – ವಿವೇಕಾನಂದ ಸಾಹಿತ್ಯದ ಜೊತೆಗೆ, ಭಗವದ್ಗೀತೆ, ಉಪನಿಷತ್ತು ಮೊದಲಾದ ಆಧ್ಯಾತ್ಮಿಕ ಗ್ರಂಥಗಳೂ ಪ್ರಕಟಣೆಗೊಳ್ಳುತ್ತಿವೆ. ಇಂಗ್ಲಿಷ್, ತಮಿಳು ಭಾಷೆಗಳ ಪುಸ್ತಕಗಳು ಮುದ್ರಣವಾಗುವುದಕ್ಕೆ ತಕ್ಕ ಆಧುನಿಕ ಮುದ್ರಣ ಯಂತ್ರಗಳನ್ನು ಮಠವು ಹೊಂದಿದೆ.

೧೯೧೪ರಲ್ಲಿ ಪ್ರಾರಂಭವಾದ 'ವೇದಾಂತ ಕೇಸರಿ' (ಇಂಗ್ಲಿಷ್) ಮಾಸಪತ್ರಿಕೆ ಜೊತೆಗೆ, ೧೯೨೧ರಲ್ಲಿ ತಮಿಳು ಮಾಸಪತ್ರಿಕೆ 'ರಾಮಕೃಷ್ಣ ವಿಜಯಂ' ಆರಂಭವಾಗಿದೆ. ತೆಲುಗಿನಲ್ಲಿ 'ಶ್ರೀರಾಮಕೃಷ್ಣ ಪ್ರಭ' ೧೯೪೪ರಲ್ಲಿ ಪ್ರಾರಂಭವಾಯಿತು (ಈಗ ಹೈದರಾಬಾದ್‌ನಿಂದ ಮುದ್ರಿತವಾಗುತ್ತಿದೆ). ಈ ಪತ್ರಿಕೆಗಳ ಲಕ್ಷಾಂತರ ಪ್ರತಿಗಳು ಪ್ರತಿ ತಿಂಗಳೂ ಪ್ರಸಾರವಾಗುತ್ತ, ಜನಮನವನ್ನು ತಲುಪುತ್ತಿವೆ.

ಉಚಿತ ಔಷಧಾಲಯ : ವೈದ್ಯಕೀಯ ಕ್ಷೇತ್ರದಲ್ಲಿ ಸಹ ಚೆನ್ನೈ ಮಠ ಉತ್ತಮ ಸೇವೆ ಸಲ್ಲಿಸುತ್ತಿದೆ. ೧೯೨೫ರಲ್ಲಿ ಪ್ರಾರಂಭವಾದ ಮಠದ ಆಸ್ಪತ್ರೆ ಈಗ ಅತ್ಯಾಧುನಿಕ ಸಲಕರಣೆಗಳಿಂದ ಸುಸಜ್ಜಿತವಾದ ಆಸ್ಪತ್ರೆಯಾಗಿ ಮಾರ್ಪಟ್ಟು, ಎಲ್ಲ ವಿಧದ ರೋಗಿಗಳಿಗೂ ಅಲ್ಪಶುಲ್ಕಕ್ಕೆ ಅಥವಾ ಉಚಿತವಾಗಿ ಔಷಧೋಪಚಾರಗಳನ್ನು ಒದಗಿಸುತ್ತಿದೆ. ಅಂದಾಜು ಪ್ರತಿನಿತ್ಯ ೭೦೦ ರೋಗಿಗಳು ಇದರ ಲಾಭ ಪಡೆಯುತ್ತಿದ್ದಾರೆ. ಸಂಚಾರಿ ಆಸ್ಪತ್ರೆ ಮೂಲಕ ಸುಮಾರು ೪೦ ಹಳ್ಳಿಗಳಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಇದಲ್ಲದೆ, ಕುಷ್ಠ ರೋಗಿಗಳಿಗಾಗಿ ಪುನರ್ವಸತಿ ಕೇಂದ್ರವಿದೆ. ೧,೭೦೦ ಜನ ರೋಗಿಗಳಿಗೆ ಉಚಿತ ಆಹಾರ, ವಸತಿ ಸೌಲಭ್ಯ ದೊರೆಯುತ್ತಿದೆ. ಚೆನ್ನೈನ ಶಂಕರ ನೇತ್ರಾಲಯ ಹಾಗೂ ಸರಕಾರಿ ಆಸ್ಪತ್ರೆಗಳ ಸಹಕಾರದಿಂದ ಕಣ್ಣಿನ ಬೇನೆ ಮತ್ತಿತರ ರೋಗಗಳಿಗೆ ಮಠವು ಸೇವಾ ಸೌಲಭ್ಯವನ್ನು ಒದಗಿಸುತ್ತಿದೆ.

೧೯೨೮ರಲ್ಲಿ ಮಠಕ್ಕೆ ಸಮೀಪವಿರುವ ಒಂದು ಕೊಳಚೆ ಪ್ರದೇಶ ಬೆಂಕಿಗೆ ಆಹುತಿಯಾಯಿತು. ಮಠದ ವತಿಯಿಂದ ಅಲ್ಲಿನ ಒಂದು ಕಾಲೋನಿಯನ್ನು ಪುನರ್ನಿರ್ಮಿಸಿ 'ರಾಮಕೃಷ್ಣಪುರಂ ಕಾಲೋನಿ' ಎಂದು ನಾಮಕರಣ ಮಾಡಲಾಗಿದೆ. ಅಲ್ಲೊಂದು ಶಾಲೆ ಹಾಗೂ ಪ್ರಾರ್ಥನಾ ಮಂದಿರ ಸಹ ನಿರ್ಮಾಣ ಮಾಡಿ ಶಿಕ್ಷಣ ನೀಡಲಾಗುತ್ತಿದೆ.

ಬಾಲಮಂದಿರ : ೮ರಿಂದ ೧೩ ವಯಸ್ಸಿನ ಬಾಲಕ / ಬಾಲಕಿಯರಿಗಾಗಿ ನಿಗಿದಿತ ದಿನಗಳಲ್ಲಿ ಚಾರಿತ್ರ್ಯನಿರ್ಮಾಣ ಮತ್ತು ಭಗವದ್ಗೀತಾ ತರಗತಿಗಳು ನಡೆಯುತ್ತಿವೆ. ಇದರಲ್ಲಿ ವ್ಯಕ್ತಿತ್ವ ವಿಕಸನಕ್ಕೆ ವಿಶೇಷ ಗಮನ ನೀಡಲಾಗಿದೆ.

ವಿವೇಕಾನಂದ ಯೂತ್ ಫೋರಂ : ೧೫ರಿಂದ ೩೫ ವಯಸ್ಸಿನವರಿಗಾಗಿ ನಡೆಯುವ ಈ ತರಗತಿಗಳ ಉದ್ದೇಶ ಯುವಜನರ ಚಾರಿತ್ರ್ಯ ನಿರ್ಮಾಣ ಹಾಗೂ ಸೇವಾಭಾವನೆಗಳ ಉನ್ನತಿ. ಈ ಸಂಘಕ್ಕೆ ಸೇರಿರುವ ಯುವಕರು ಚೆನ್ನೈನ ರಾಯಪೇಟೆಯಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ನಿರ್ಗತಿಕ ರೋಗಿಗಳಿಗೆ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.

ವೃತ್ತಿ ತರಬೇತಿಗಳು : ಮಠದ ವತಿಯಿಂದ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗಾಗಿ (೧೫ ವರ್ಷ ಮೇಲ್ಪಟ್ಟು) ನರ್ಸಿಂಗ್, ಕಂಪ್ಯೂಟರ್ ತರಬೇತಿಗಳನ್ನು ನಡೆಸಿ, ಸ್ವಾವಲಂಬಿಗಳಾಗಿ ಬದುಕಲು, ವಿಶೇಷ ತರಬೇತಿ ನೀಡಲಾಗುತ್ತಿದೆ.

ಪರಿಹಾರ ಕಾರ್ಯ : ಚೆನ್ನೈ ಮಠದ ವತಿಯಿಂದ ಕ್ಷಾಮ, ಬರಪರಿಹಾರ, ಬೆಂಕಿ ಆಕಸ್ಮಿಕ, ಸೋಂಕು ರೋಗಗಳಿಂದ ಆಗುವ ಹಾನಿಗಳಿಗೆ ವಿಶೇಷ ಪರಿಹಾರವನ್ನು ಸೂಕ್ತ ಸಮಯದಲ್ಲಿ ಒದಗಿಸಲಾಗುತ್ತಿದೆ.

ವಿವೇಕಾನಂದ ಇಲ್ಲಂ : ೧೯೯೭ರಲ್ಲಿ ಸ್ವಾಮಿ ವಿವೇಕಾನಂದರು ತಂಗಿದ್ದ ಬಂಗಲೆ ಈಗ 'ಸ್ವಾಮಿ ವಿವೇಕಾನಂದ ಮ್ಯೂಸಿಯಂ' ಆಗಿದೆ. ಸ್ವಾಮೀಜಿಯವರ ಜೀವನಕ್ಕೆ ಸಂಬಂಧಪಟ್ಟ ವಿಶಿಷ್ಟ ಚಿತ್ರಫಲಕಗಳನ್ನೂ, ದೃಶ್ಯ-ಶ್ರಾವ್ಯ ಪ್ರದರ್ಶನಗಳನ್ನೂ ಇಲ್ಲಿ ಕಾಣಬಹುದು. ಇಲ್ಲಿ ಯುವಕರಿಗೆ ಯೋಗ ಮತ್ತು ವ್ಯಕ್ತಿತ್ವ ವಿಕಸನ ತರಗತಿಗಳನ್ನೂ ನಡೆಸಲಾಗುತ್ತಿದೆ.

ಈ ಮಾತೃಸಂಸ್ಥೆಯ ಸ್ಥಾಪನೆಯ ನಂತರ ದಕ್ಷಿಣ ಭಾರತದಲ್ಲಿ ಅನೇಕ ರಾಮಕೃಷ್ಣ ಮಠಗಳ ಸ್ಥಾಪನೆ ಆಗಿ, ಅವೆಲ್ಲವೂ ದಿವ್ಯತ್ರಯರ ಸಂದೇಶವನ್ನು ಸಮರ್ಥವಾಗಿ ಸಾರುತ್ತಿವೆ. ಹಾಗೆಯೇ, ಜೀವನಲ್ಲಿ ಶಿವನನ್ನು ಕಾಣುವ ಸ್ವಾಮಿ ವಿವೇಕಾನಂದರ ಕನಸನ್ನು ಸಾರ್ಥಕಗೊಳಿಸುತ್ತಿವೆ. ಹೀಗೆ ಚೆನ್ನೈ ಶ್ರೀರಾಮಕೃಷ್ಣ ಮಠವು ದಕ್ಷಿಣ ಭಾರತದಲ್ಲಿ ಇಂದು ಹೆಮ್ಮರವಾಗಿ ಬೆಳೆದುನಿಂತಿರುವ ರಾಮಕೃಷ್ಣ ವಿವೇಕಾನಂದ ಆಂದೋಲನದ ತವರೂರಾಗಿದೆ.